**ಕರ್ನಾಟಕ ರಕ್ಷಣಾ ವೇದಿಕೆ**

# ಅಧ್ಯಕ್ಷರ ಲೇಖನಿಯಿಂದ

ಪ್ರೀತಿಯ ಕನ್ನಡಿಗ,

1956ರಲ್ಲಿ ಶತಮಾನಕ್ಕೂ ಮೀರಿದ ಸಂಘಟಿತ ಹೋರಾಟದ ಕಾರಣದಿಂದಾಗಿ ಕನ್ನಡಿಗರ ಹಂಬಲವೊಂದು ಪೂರೈಕೆಯಾಯಿತು. ಅಂದು ನಾನಾ ಆಳ್ವಿಕೆಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡ ನಾಡು ಒಂದಾಯಿತು. ಈ ಕನಸು ನನಸಾದ ಸಂದರ್ಭದಲ್ಲಿ ಕನ್ನಡ ಜನತೆ ತಮ್ಮೆಲ್ಲ ನೋವು, ಸಂಕಷ್ಟಗಳು ಇಂದಿಗೆ ಮುಗಿದವೆನ್ನುವ ಭರವಸೆಯ ಭಾವನೆಯಿಂದ ಆನಂದಭರಿತರಾಗಿದ್ದರು. ಇನ್ನು ನಮ್ಮನ್ನಾಳುವ ಭಾಷೆ ನಮ್ಮ ಕನ್ನಡವೇ, ಹಾಗಾಗಿ ಪರಭಾಷಿಕರ ಮುಂದೆ ಕೈ ಒಡ್ಡಿ ನಿಲ್ಲುವ ಅಗತ್ಯಗಳು ನಮಗಿರುವುದಿಲ್ಲ, ನಮ್ಮ ನಾಡಿನಲ್ಲೂ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ, ನಮ್ಮಲ್ಲೂ ಉದ್ದಿಮೆಗಳು ತಲೆ ಎತ್ತಲಿವೆ ಎನ್ನುವ ಭರವಸೆ ನಾಡ ಕನ್ನಡಿಗರಲ್ಲಿತ್ತು. ಅದಕ್ಕೆ ಪೂರಕವಾಗಿ ಆಗಾಗಲೆ ಅನೇಕ ಸಾರ್ವಜನಿಕ ಉದ್ದಿಮೆಗಳು, ಕೇಂದ್ರ ಸರ್ಕಾರಿ ಉದ್ದಿಮೆಗಳು ಕನ್ನಡ ನೆಲದಲ್ಲಿ ತಲೆ ಎತ್ತಿ ನಿಲ್ಲತೊಡಗಿದ್ದವು. ಇಂತಹ ಸನ್ನಿವೇಶದಲ್ಲಿ ಕನ್ನಡಿಗರಿಗೆ ಭ್ರಮನಿರಸನವಾಗಿದ್ದು ಅಂತಹ ಉದ್ದಿಮೆಗಳ ಮೇಲಧಿಕಾರಿಗಳಾಗಿ, ಮಾನವ ಸಂಪನ್ಮೂಲ ಅಧಿಕಾರಿಗಳಾಗಿ ಬಂದವರು ಪರಭಾಷಿಕರಾಗಿದ್ದು, ತಮ್ಮವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಮೂಲಕ ವಲಸೆ ಮಾಡಿಸಿ ಕನ್ನಡಿಗರ ಬದುಕುವ ಹಕ್ಕಿಗೆ ಸಂಚಕಾರ ತಂದದ್ದರಿಂದ. ಬಿ.ಇ.ಎಲ್, ರೇಲ್ವೆ, ಐ.ಟಿ.ಐ, ಬಿ.ಇ.ಎಮ್.ಎಲ್, ಬಿ.ಎಚ್.ಇ.ಎಲ್, ಎಚ್.ಎ.ಎಲ್ . . . ಇತ್ಯಾದಿ ಎಲ್ಲ ಕಡೆ ಪರಭಾಷಿಕರೇ ತುಂಬಿದರು. ಇದರ ಪರಿಣಾಮ ನೇರವಾಗಿ ಕನ್ನಡಿಗರ ಉದ್ಯೋಗಾವಕಾಶಗಳ ಮೇಲಾಯಿತು.

ತೊಂಬತ್ತರ ದಶಕದಲ್ಲಿ ಜಾಗತೀಕರಣಕ್ಕೆ ದೇಶದ ಹೆಬ್ಬಾಗಿಲು ತೆರೆದಾಗ ನಮ್ಮ ನಾಡಿನ ಹವಾಮಾನ, ಉದ್ದಿಮೆಗಳ ಆರಂಭಕ್ಕಿರುವ ಪೂರಕ ವಾತಾವರಣಗಳ ಕಾರಣದಿಂದಾಗಿ ಇಲ್ಲಿಗೆ ನೂರಾರು ಸಂಸ್ಥೆಗಳೂ, ಬಹುರಾಷ್ಟ್ರೀಯ ಸಂಸ್ಥೆಗಳೂ ಬಂದವು. ನಮ್ಮ ನೆಲದಲ್ಲಿ ಉದ್ದಿಮೆ ಆರಂಭ ಮಾಡಬೇಕಾದರೆ ನೀವು ಇಷ್ಟು ಜನ ಕನ್ನಡಿಗರಿಗೆ ಕೆಲಸ ಕೊಡಬೇಕು, ಪೂರಕ ಉದ್ದಿಮೆಗಳಾದ ಕ್ಯಾಂಟೀನ್, ವಾಹನ, ಭದ್ರತೆ . . .ಇತ್ಯಾದಿಗಳನ್ನು ನಡೆಸಲು ಕನ್ನಡಿಗರಿಗೇ ಅವಕಾಶ ಮಾಡಿಕೊಡಬೇಕು ಎನ್ನುವ ಯಾವ ನಿಬಂಧನೆಗಳನ್ನೂ ನಮ್ಮ ಸರ್ಕಾರಗಳು ಪರಿಣಾಮಕಾರಿಯಾಗಿ ಹಾಕದೆ ಹೋದವು. ಇದರ ಪರಿಣಾಮವಾಗಿ ಮಾಹಿತಿ ತಂತ್ರಜ್ಞಾನದ, ಜೈವಿಕ ತಂತ್ರಜ್ಞಾನದ ಸಂಸ್ಥೆಗಳಲ್ಲಿಯೂ ಅವಕಾಶಗಳು ಕನ್ನಡಿಗರ ಕೈ ತಪ್ಪಿಹೋದವು. ಆಂತಹ ಸಂಸ್ಥೆಗಳಲ್ಲಿ ಆಯಕಟ್ಟಿನ ಜಾಗಗಳಲ್ಲಿ ಪರಭಾಷಿಕರು ಕೂತಿದ್ದಾಗ ತಮ್ಮವರ ಪರವಾಗಿ ಸ್ಪಷ್ಟವಾದ ಪಕ್ಷಪಾತ ತೋರಿ, ತಮ್ಮವರನ್ನೇ ತುಂಬಿದರೆ . . . ಕನ್ನಡಿಗ ಮೇಲಧಿಕಾರಿಗಳು ಪೊಳ್ಳು ರಾಷ್ಟ್ರೀಯತೆಯ ಭ್ರಮೆಯಲ್ಲಿ ಮುಳುಗಿ ತಮ್ಮತನವನ್ನೇ ಮರೆತು ಕುಳಿತಿದ್ದರು. ಇದರ ಪರಿಣಾಮವಾಗಿಯೇ ಇಂದು ಕನ್ನಡ ನಾಡಿನ ಉದ್ದಿಮೆಗಳಲ್ಲಿ ಕನ್ನಡಿಗರನ್ನು ಕಡೆಗಣಿಸಲಾಗುತ್ತಿದೆ.

ಹೊಸದಾಗಿ ಉದ್ದಿಮೆಗಳು ಆರಂಭವಾದ ಸಂದರ್ಭಗಳಲ್ಲೂ ಸಹ ಪರಭಾಷಿಕರಿಗೆ ಮಣೆ ಹಾಕುವ ಸಂಪ್ರದಾಯವನ್ನು ನಮ್ಮ ಸರ್ಕಾರಗಳು ಪಾಲಿಸಿದವು. ಇದಷ್ಟೇ ಅಲ್ಲದೆ ಕನ್ನಡ ಉದ್ದಿಮೆದಾರರಿಗೆ ಸೂಕ್ತ ಬೆಂಬಲ ನೀಡದೆ ನಿರ್ಲಕ್ಷ್ಯ ಮಾಡಿದವು. ಪರಭಾಷಿಕರ ಕಿರುಕುಳದಿಂದಾಗಿ ಈ ಸಂಸ್ಥೆಗಳು ನರಳುತ್ತಿರುವಾಗ ಯಾವ ಸಹಾಯಕ್ಕೂ ನಮ್ಮ ಸರ್ಕಾರ ಮುಂದಾಗಲಿಲ್ಲ. ಕನ್ನಡ ನಾಡಿನಲ್ಲಿ ಹೆಚ್ಚುತ್ತಿರುವ ಉದ್ದಿಮೆಗಾರಿಕೆಯ ಅವಕಾಶಗಳನ್ನು ಕನ್ನಡಿಗರಿಗೇ ದೊರಕಿಸಿ ಕೊಡುವ ಒಂದು ಸಣ್ಣ ಪ್ರಯತ್ನವೂ ಈ ಸರ್ಕಾರಗಳಿಂದ ಆಗಲಿಲ್ಲ.

ಇದರ ಪರಿಣಾಮವಾಗಿಯೇ ಇಂದು ಕನ್ನಡಿಗರಿಗೆ ಉದ್ದಿಮೆಗಾರಿಕೆ ಮತ್ತು ಉದ್ಯೋಗದ ಕೊರತೆಗಳು ಪೆಡಂಭೂತವಾಗಿ ಮೇಲೆದ್ದು ನಿಂತು ಕನ್ನಡ ಕುಲದ ಅಸ್ತಿತ್ವವನ್ನೇ ಅಲುಗಾಡಿಸುತ್ತಿವೆ. ಕರ್ನಾಟಕ ರಕ್ಷಣಾ ವೇದಿಕೆಯು ನಾಡಿನ ಎಲ್ಲ ಕನ್ನಡ ಉದ್ದಿಮೆದಾರರ ಮತ್ತು ಉದ್ಯೋಗಿಗಳ ಬೆಂಬಲವಾಗಿ ನಿಂತಿದೆ ಮತ್ತು ಈ ಮೂಲಕ ಕನ್ನಡಿಗರು ಹೆಚ್ಚು ಹೆಚ್ಚು ಉದ್ದಿಮೆಗಳನ್ನು ಆರಂಭಿಸಬೇಕೆಂದೂ, ತಮ್ಮ ಉದ್ದಿಮೆಗಳಲ್ಲಿ ಕನ್ನಡಿಗರಿಗೇ ಉದ್ಯೋಗ ನೀಡಬೇಕೆಂದೂ, ಆ ಮೂಲಕ ನಾಡಿಗೆ ಶಾಪವಾಗಿರುವ ಅನಿಯಂತ್ರಿತ ವಲಸೆಗೆ ಕಡಿವಾಣ ಹಾಕುವಲ್ಲಿ ನಮ್ಮೊಂದಿಗೆ ಕೈಜೋಡಿಸಬೇಕೆಂದೂ ವಿನಯಪೂರ್ವಕವಾಗಿ ಕರೆ ನೀಡುತ್ತದೆ.

ನಿಮ್ಮ ಪ್ರೀತಿಯ ಕನ್ನಡ ಸೇವಕ

ಟಿ.ಎ. ನಾರಾಯಣ ಗೌಡ